ಪದಬಂಧ



**ಎಡದಿಂದ ಬಲಕ್ಕೆ**

1. ಅಲ್ಲಿ ಲಭಿಸುವ ಅನುಕೂಲಗಳ ಬಗೆಗೇ ಯೋಚನೆ ಯಾವಾಗಲೂ 4
3. ವಾರಿಧಿಯ ದುರುಪಯೋಗಕ್ಕೆ ತೀವ್ರ ಪ್ರತಿಭಟನೆ 3
4. ಸದಾ ಸಿಡಿಮಿಡಿ ಮಾತುಗಳನ್ನೇ ಆಡುವ ಸ್ವಭಾವದವ ಆತ 3
6. ಮಾರೀಚನ ಜಿಂಕೆಯ ರೂಪ ; ಅದೊಂದು ಮಿಥ್ಯಾ ದೃಶ್ಯ 4
7. ಮಾನಸಿಕ ಯಾತನೆಗೆ ಕಾರಣನಾದ ಆತನ ಮಗ 3
9. ದುಷ್ಟರ ಸಂಹಾರವಾದದ್ದರ ಕುರಿತು ಗಾಢ ಸಂಶಯ 3
11. ಕದ್ದು ತಂದ ಜನರೊಡನೆ ನಡೆಯಿತು ಭಾರೀ ಯುದ್ಧ 3
13. ಹಳ್ಳವನ್ನು ತೋಡಿದರೆ ಸಿಗುವಂತಹದಲ್ಲ ಈ ಸಾಗರ ರತ್ನ 3
15. ಪರಾಕ್ರಮ ಏನಿಲ್ಲ; ಇದು ಅಡುಗೆಯ ಒಂದು ವಿಧಾನ ಅಷ್ಟೆ 4
17. ಮನಸು ಅರಳುವಂತೆ ಮಾಡಿದ ಸಂತಸ, ಹಿಗ್ಗು 3
18. ಕಸರತ್ತಿನ ಲಾಗಕ್ಕೆ ಮರುಳಾದ ಗುಮಾಸ್ತ 3
19. ಕಾಡಿನಲ್ಲಿ ಕಂಪು ಬೀರಿದ ಹೂವಿನದು ಗಾಢ ರಕ್ತ ವರ್ಣ 4

**ಮೇಲಿನಿಂದ ಕೆಳಕ್ಕೆ**

1. ಅರ್ಧ ಕೆಲಸ ಮಾಡಿ ಕೈಬಿಟ್ಟ ನೀಚ ಮನುಷ್ಯ 3
2. ಕೈ ಸಾಲ ಮಾಡಿ ಪಡೆದದ್ದು ರೋಗನಿರೋಧಕ ಮದ್ದು 3
3. ಒಳ್ಳೆಯವನಾದ ಆತನಲ್ಲಿ ಹಲವಾರು ಸದ್ಗುಣಗಳು ಕರಗಿ ಬೆರೆತಿವೆ 3
5. ಆಕಾಶದೆತ್ತರಕ್ಕೆ ಕೂಗಿದ ಧ್ವನಿ ಕರ್ಣ ಕಠೋರ 3
7. ವೇತನಕ್ಕೆ ಕಾದು ನಿಂತವನ ಆತುರ ನೋಡಿ 3
8. ಮುನಿಯನ್ನು ಸುಪ್ರೀತಗೊಳಿಸಿದ್ದು ನಮ್ಮದೇ ಒಂದು ಪವಿತ್ರ ನದಿ 3
9. ಗ್ರಹಿಸಲೂ ಸಾಧ್ಯವಾಗದಂತಹ ವಸ್ತುಗಳ ಅದ್ಭುತ ಶೇಖರಣೆ 3
10. ಮಳೆಯಲ್ಲೇ ನೆನೆದು ಬರುತ್ತಿರುವ ಸುಂದರ ಜೋಡಿ ನೋಡಿ 3
12. ದೋಣಿ ನಡೆಸುವವನನ್ನು ಸುತ್ತಾಡಿಸಿ ಸುಸ್ತುಮಾಡು 3
14. ಗೌಡನನ್ನೇ ಬೆದರಿಸಿದ ಮಂಗ ಮುಂದಾಳು ತಲೆಕೆಳಗು 3
15. ಒಳ್ಳೆಯ ಕಂಪನ್ನು ಬೀರುತ್ತಿದೆ ಸಿಹಿ ಪೇಯ 3
16. ಮಾಲೆ ತೊಡಿಸಿ ಪುರಸ್ಕರಿಸಿದರೆಂದು ಇಂಥ ಸೊಕ್ಕು! 3

## 18–05–2023 ಉತ್ತರಗಳು

**ಎಡದಿಂದ ಬಲಕ್ಕೆ**

1.ಉರಗ 3.ಸುರುಚಿ 4.ಟಾಕೀಸು 6.ತತ್ತರ 7.ಸಮಾನತೆ 9. ಗಮನಿಸು 11. ಲೆಕ್ಕಣಿಕೆ 13. ರವಿವಾರ 15. ರಕಮು 17. ಧರಿಸಿ 18. ಸುಗಂಧ 19. ಕಲಕು

**ಮೇಲಿನಿಂದ ಕೆಳಕ್ಕೆ**

1. ಉಚಿತ 2. ಗಟಾರ 3. ಸುಮನ 5. ಸುಗಮ 7. ಸರಮಾಲೆ 8. ತೆಗಳಿಕೆ 9. ಗಡಿಯಾರ 10. ಸುಮಧುರ 12. ಣಿರಧ (=ಧರಣಿ ತಲೆಕೆಳಗು) 14. ವಿರೋಧ 15. ರಸಿಕ 16. ಮುಸುಕು

ಪ್ರಶ್ನಾಂಕಣ

## ಅಂಟಾರ್ಕ್ಟಿಕ್ ಮತ್ತು ಅಂಟಾರ್ಕ್ಟಿಕಾ: ವ್ಯತ್ಯಾಸವೇನು?

ಧರೆಯ ದಕ್ಷಿಣ ಗೋಳಾರ್ಧದಲ್ಲಿ 'ದಕ್ಷಿಣ ಧ್ರುವ'ವನ್ನು ಪರಿವರಿಸಿ ಹರಡಿರುವ, ದಕ್ಷಿಣ ಗೋಳಾರ್ಧದ ಶೇ.20ರಷ್ಟು ವಿಸ್ತಾರದ ಪ್ರದೇಶವೇ ಅಂಟಾರ್ಕ್ಟಿಕ್ (Antarctic). ಇನ್ನೂ ನಿಖರವಾಗಿ ಹೇಳಬೇಕೆಂದರೆ 60 ಡಿಗ್ರಿ ದಕ್ಷಿಣ ಅಕ್ಷಾಂಶದ ಆಚೀಚೆಗೆ 32ರಿಂದ 48 ಕಿ.ಮೀ. ದೂರಗಳವರೆಗೆ ದಕ್ಷಿಣ ಧ್ರುವವನ್ನು ಪರಿವರಿಸಿರುವ ಅಂಟಾರ್ಕ್ಟಿಕ್ ಕನ್ವರ್ಜೆನ್ಸ್ (Antarctic Convergence) ಗಡಿ ರೇಖೆಯ ದಕ್ಷಿಣಕ್ಕಿರುವ ಇಡೀ ಪ್ರದೇಶವೇ ಅಂಟಾರ್ಕ್ಟಿಕ್ (ಚಿತ್ರ 1). ಸ್ಪಷ್ಟವಾಗಿಯೇ ಅಂಟಾರ್ಕ್ಟಿಕ್ ಪ್ರದೇಶ ಸಮೀಪ 14 ದಶಲಕ್ಷ ಚದರ ಕಿ.ಮೀ. ವಿಸ್ತಾರದ ಅಂಟಾರ್ಕ್ಟಿಕಾ ಭೂಖಂಡವನ್ನು (ಚಿತ್ರ 2), 22 ದಶಲಕ್ಷ ಚದರ ಕಿ.ಮೀ ವೈಶಾಲ್ಯದ 'ದಕ್ಷಿಣ ಮಹಾಸಾಗರ'ವನ್ನು ಮತ್ತು ಅಂಟಾರ್ಕ್ಟಿಕ್ ಕನ್ವರ್ಜೆನ್ಸ್ ಗಡಿ ರೇಖೆಯ ದಕ್ಷಿಣಕ್ಕಿರುವ ಎಲ್ಲ ದ್ವೀಪಗಳನ್ನೂ ಒಳಗೊಂಡಿದೆ. ಪೆಸಿಫಿಕ್, ಅಟ್ಲಾಂಟಿಕ್ ಮತ್ತು ಹಿಂದೂ ಮಹಾ ಸಾಗರಗಳ ಬೆಚ್ಚನೆಯ ನೀರು ದಕ್ಷಿಣ ಮಹಾ ಸಾಗರದ ಶೀತಲ ಜಲದೊಡನೆ ಬೆರೆಯುವ ಸ್ಥಳವನ್ನು ನಿರ್ಧರಿಸುವ ಈ ಗಡಿರೇಖೆಗೆ ಆ ಕಾರಣದಿಂದಲೇ ಅಂಟಾರ್ಕ್ಟಿಕ್ ಕನ್ವರ್ಜೆನ್ಸ್ ಎಂಬ ಹೆಸರು.

ಹೀಗೆ ಅಂಟಾರ್ಕ್ಟಿಕ್ ಒಂದು ಪ್ರದೇಶವಾದರೆ ಅದರೊಳಗಿನ ಒಂದು ಭೂ ಖಂಡವೇ ಅಂಟಾರ್ಕ್ಟಿಕಾ (Antarctica). ದಕ್ಷಿಣ ಧ್ರುವವನ್ನು ಆವರಿಸಿ ಹರಡಿರುವ ಈ ಭೂಖಂಡ (ಚಿತ್ರ 2) 14 ದಶಲಕ್ಷ ಚದರ ಕಿ.ಮೀ. ವಿಸ್ತಾರವನ್ನು, ಎಂದರೆ ಆಸ್ಟ್ರೇಲಿಯಾ ಭೂಖಂಡದ ಸಮೀಪ ಇಮ್ಮಡಿಯಷ್ಟು ವಿಸ್ತಾರವನ್ನು, ಪಡೆದಿದೆ. ವಿವಿಧ ರಾಷ್ಟ್ರಗಳಾಗಿ ವಿಂಗಡಣೆಗೊಳ್ಳದ ಮತ್ತು ಯಾವ ರಾಷ್ಟ್ರಕ್ಕೂ ಸೇರಿಲ್ಲದ ಈ ಅತಿ ವಿಶಿಷ್ಟ ಭೂಖಂಡದ ಶೇ.98ರಷ್ಟು ಮೇಲ್ಮೈ ಅನ್ನು ಸರಾಸರಿ ಒಂದೂವರೆ ಕಿ.ಮೀ. ದಪ್ಪದ ಶಾಶ್ವತ ಹಿಮ ಚಪ್ಪಡಿಗಳು ಆವರಿಸಿವೆ; ಹಾಗಾಗಿ ಇದು ಧರೆಯ ಅತ್ಯಂತ ಶೀತಲ ಭೂಖಂಡವಾಗಿದೆ (ಇಲ್ಲಿನ ದಾಖಲೆಯ ಉಷ್ಣತೆ ಶೂನ್ಯಕ್ಕಿಂತ 93.2 ಡಿಗ್ರಿ ಸೆಲ್ಸಿಯಸ್!). ಅಂಟಾರ್ಕ್ಟಿಕಾ ಭೂಖಂಡದಲ್ಲಿ ಮಳೆ ಅತ್ಯಂತ ಅಪರೂಪ; ಹಾಗಾಗಿ ಇದು ಧರೆಯ ಅತ್ಯಂತ ವಿಶಾಲ ಶೀತಲ ಮರುಭೂಮಿಯಾಗಿದೆ. ಅಂಟಾರ್ಕ್ಟಿಕಾದ ಅತಿ ಶೀತಲ ಪರಿಸರದಿಂದಾಗಿ ಅಲ್ಲಿ ಸಸ್ಯಗಳು ಮತ್ತು ಪ್ರಾಣಿಗಳು ಅತ್ಯಂತ ವಿರಳ. ಪ್ರಮುಖವಾಗಿ ಪೆಂಗ್ವಿನ್ ಹಕ್ಕಿಗಳ ಹಲವು ಪ್ರಭೇದಗಳು (ಚಿತ್ರ 3) ಅಲ್ಲಿಗೆ ಸಂತಾನವರ್ಧನೆಗೆ ಬರುತ್ತವೆ.




ತದ್ವಿರುದ್ಧವಾಗಿ ಅಂಟಾರ್ಕ್ಟಿಕ್‌ನ ದಕ್ಷಿಣ ಮಹಾಸಾಗರದ ನೀರು ಜೀವಿ ಸಮೃದ್ಧವಾಗಿದೆ. ಹಾಗಾಗಿ ಸೂಕ್ಷ್ಮಗಾತ್ರದ ಪ್ಲಾಂಕ್ಟನ್‌ಗಳಿಂದ ಬೃಹದ್ಗಾತ್ರದ ತಿಮಿಂಗಿಲಗಳವರೆಗೆ ಅಲ್ಲಿ ಬೇಟೆಗಾರರೂ ಬಲಿಪ್ರಾಣಿಗಳೂ ಹೇರಳವಾಗಿ ನೆಲೆಸಿವೆ.

■ ಎನ್. ವಾಸುದೇವ್